# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ದಿನಾಂಕ:31-3-2010ಕ್ಕೂ ಮುಂಚಿತವಾಗಿ ಎನ್.ಪಿ.ಎಸ್
ನೌಕರರ ವೇತನದಿಂದ ಕಟಾವಣೆ ಮಾಡಲಾಗಿರುವ
ಎನ್.ಪಿ.ಎಸ್. ಮೊತ್ತವನ್ನು ಹಿಂದಿರುಗಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ ಸ್ಪೆಷಲ್ 04 ಪಿ.ಇ.ಟಿ 2005 ದಿನಾಂಕ: 31-03-2006.
2. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 79 ಟಿಎಆರ್ 2006, ದಿನಾಂಕ: 16-06-2007.
3. ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ 79 ಟಿಎಆರ್ 2006 ದಿನಾಂಕ: 06-09-2007.
4. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ (ಎಸ್.ಪಿ.ಎಲ್) 28 ಪಿಇಎಸ್ 2009 ದಿನಾಂಕ: 19-01-2010.
5. ಖಜಾನೆ ಇಲಾಖೆಯ ನಿರ್ದೇಶಕರ ಪತ್ರಗಳ ಸಂಖ್ಯೆ: ಖನಿ/ಎಸ್.ಪಿ.ಎಸ್/59-10-11 ದಿನಾಂಕ:1-7-2011, 19-8-2011 ಮತ್ತು 6-7-2012.

ಪ್ರಸ್ತಾವನೆ:

1. ಮೇಲೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ದಿನಾಂಕ:1-4-2006ರಂದು ಅಥವಾ ಆ ತರುವಾಯ ಸರ್ಕಾರಿ ಸೇವೆಗೆ ಸೇರಿಕೊಳ್ಳುವ ನೌಕರರಿಗಾಗಿ ನೂತನ ಪಿಂಚಣಿ ಪದ್ಧತಿ ಯೋಜನೆ (ಎನ್.ಪಿ.ಎಸ್.) ಎಂದು ಕರೆಯಲಾಗುವ ಒಂದು ನಿಗದಿತ ವಂತಿಗೆ ಪಿಂಚಣಿ ಯೋಜನೆಗೆ ಅನುಮೋದನೆ ನೀಡಿದೆ.

2. ಮೇಲೆ (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಎನ್.ಪಿ.ಎಸ್.ನ. ಹಂತ-1 ರ ಕೊಡುಗೆಯಾಗಿ ದಿನಾಂಕ:01-04-2006 ರಂದು ಹಾಗೂ ತದನಂತರ ಸರ್ಕಾರಿ ಸೇವೆಗೆ ಸೇರಿರುವ ನೌಕರರ ವೇತನದಿಂದ 2007ರ ಜುಲೈ ತಿಂಗಳಿನ ವೇತನ ಬಿಲ್ಲುಗಳಿಂದ ಪ್ರಾರಂಭಿಸಿ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳು ಎನ್.ಪಿ.ಎಸ್. ನೌಕರರ ವಂತಿಗೆಯನ್ನು ಕಟಾವಣೆ ಮಾಡುವಂತೆ ಆದೇಶಿಸಲಾಗಿರುತ್ತದೆ. ಹಾಗೆಯೇ ಸರ್ಕಾರಿ ನೌಕರರ ವಂತಿಗೆಯನ್ನು ಠೇವಣಿ ಖಾತೆ ಲೆಕ್ಕಶೀರ್ಷಿಕೆ "8342-00-120-2-01" ಇದರಲ್ಲಿ ಜಮೆ ಮಾಡಲು ಸೂಚಿಸಲಾಗಿರುತ್ತದೆ.

3. ಮೇಲೆ (3)ರಲ್ಲಿ ಓದಲಾದ ದಿನಾಂಕ:6-9-2007ರ ಸುತ್ತೋಲೆಯಲ್ಲಿ ಮುಂದಿನ ಆದೇಶದವರೆಗೆ ಎನ್.ಪಿ.ಎಸ್. ಹಂತ 1ರ ಸಲುವಾಗಿ ವಂತಿಗೆಯನ್ನು ಕಟಾವಣೆ ಮಾಡದಿರುವಂತೆ ಸೂಚಿಸಲಾಗಿರುತ್ತದೆ.

4. ಪುನ: ಮೇಲೆ (4)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ದಿನಾಂಕ:01-04-2006 ರಂದು ಹಾಗೂ ತದನಂತರ ಸರ್ಕಾರಿ ಸೇವೆಗೆ ಸೇರಿಕೊಳ್ಳುವ ಸರ್ಕಾರಿ ನೌಕರರ ವಂತಿಗೆ ಪಿಂಚಣಿ ಯೋಜನೆಯನ್ನು ದಿನಾಂಕ:1-4-2010ರಿಂದ ಕಾರ್ಯಾರಂಭ ಮಾಡಲು ಆದೇಶಿಸಲಾಗಿದ್ದು, ಸರ್ಕಾರಿ ನೌಕರರ ವಂತಿಗೆಯನ್ನು ಏಪ್ರಿಲ್ 2010 ರಲ್ಲಿ ಪಾವತಿಸಲಾಗುವ ಮಾರ್ಚ್ 2010ರ ವೇತನದಿಂದ ಪ್ರಾರಂಭಿಸಲು ಸೂಚಿಸಲಾಗಿರುತ್ತದೆ.

..2

5. ಮೇಲೆ (5) ರಲ್ಲಿ ಓದಲಾದ ಪತ್ರಗಳಲ್ಲಿ ಖಜಾನೆ ನಿರ್ದೇಶಕರು ದಿನಾಂಕ:16–6–2007ರ ಆದೇಶದ ಸೂಚನೆಗಳಂತೆ ಎನ್.ಪಿ.ಎಸ್. ಹಂತ–1ರ ಕೊಡುಗೆಯಾಗಿ ಕೆಲವು ಹಣ ಸೆಳೆಯುವ ಹಾಗೂ ಬಟವಾಡೆ ಅಧಿಕಾರಿಗಳು 2007ರ ಜುಲೈ–ಆಗಸ್ಟ್ ತಿಂಗಳ ವೇತನ ಬಿಲ್ಲುಗಳಲ್ಲಿರುವಂತೆ ಎನ್.ಪಿ.ಎಸ್. ನೌಕರರ ವಂತಿಗೆಯನ್ನು ಕಟಾವಣೆ ಮಾಡಿ ಖಜಾನೆಗಳಿಗೆ ಬಿಲ್ಲುಗಳನ್ನು ಸಲ್ಲಿಸಿರುವುದು ಕಂಡು ಬಂದಿರುತ್ತದೆಂದು ಹಾಗೂ ಈ ವಂತಿಗೆಗಳನ್ನು ಖಜಾನೆಗಳ ಲೆಕ್ಕಶೀರ್ಷಿಕೆ "8342–ಸಾರ್ವಜನಿಕ ಲೆಕ್ಕ ನಿಧಿಯಲ್ಲಿ ಇಡಲಾಗಿದೆಯೆಂದು ತಿಳಿಸಿದ್ದಾರೆ ಹಾಗೂ ಕೆಲವು ಡಿ.ಡಿ.ಓ.ಗಳು ಇತರೆ ರಾಜಸ್ವ ಸ್ವೀಕೃತಿಗಳ ಲೆಕ್ಕಶೀರ್ಷಿಕೆಗೆ ಜಮೆ ಮಾಡಿರುವುದಾಗಿ ತಿಳಿಸಿರುತ್ತಾರೆ. 8342 ಲೆಕ್ಕಶೀರ್ಷಿಕೆಯು ಠೇವಣಿ ಖಾತೆಗೆ ಸಂಬಂಧಿಸಿದ್ದು, ಠೇವಣಿ ಖಾತೆಯ ಆಡಳಿತಗಾರರು ಚೆಕ್ಕಿನ ಮೂಲಕ ಮೊತ್ತವನ್ನು ಹಿಂಪಡೆಯಬೇಕಾಗಿರುತ್ತದೆ. ಆದರೆ ಈ ರೀತಿ ಜಮೆ ಮಾಡಿರುವ ಪ್ರತಿಯೊಂದು ಡಿ.ಡಿ.ಓ.ಗಳಿಗೆ ಚೆಕ್ಕು ಪುಸ್ತಕಗಳನ್ನು ನೀಡುವುದು ಪ್ರಾಯೋಗಿಕವಾಗಿ ಕಷ್ಟವಾಗುವುದರಿಂದ ಸರ್ಕಾರವು ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, ಏಕಕಾಲಿಕ ಕ್ರಮವಾಗಿ, ಪೇಯೀಸ್ ರಸೀದಿ ಮೂಲಕ ಸೆಳೆಯುವ ಆದೇಶವನ್ನು ನೀಡಲು ಕೋರಿರುತ್ತಾರೆ. ಹಾಗೆಯೇ ವಿವಿಧ ಇಲಾಖೆಯ ರಾಜಸ್ವ ಲೆಕ್ಕಶೀರ್ಷಿಕೆಗೆ ಜಮೆಯಾಗಿರುವ ಮೊತ್ತವನ್ನು ಮರುಪಾವತಿ ಮಾಡಲು ಹಣ ಸೆಳೆಯುವ ಹಾಗೂ ಬಟವಾಡೆ ಅಧಿಕಾರಿಗಳು ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 142ರ ಪ್ರಕಾರ ಕ್ರಮ ಕೈಗೊಳ್ಳುವ ಬಗ್ಗೆ ಮತ್ತು ನೌಕರರ ವೇತನದಲ್ಲಿ N.P.S. contribution ಸೆಳೆಯದೇ ಇರುವ ಪ್ರಕರಣಗಳಲ್ಲಿ ವ್ಯತ್ಯಾಸದ ಮೊತ್ತವನ್ನು ಸೆಳೆದು ನೌಕರರಿಗೆ ಪಾವತಿಸುವ ಬಗ್ಗೆ ಆದೇಶವನ್ನು ಹೊರಡಿಸಲು ಕೋರಿರುತ್ತಾರೆ.

6. ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಇ 50 ಟಿಎಆರ್ 2013, ಬೆಂಗಳೂರು, ದಿನಾಂಕ:03–09–2013.**

ನೂತನ ಪಿಂಚಣಿ ಪದ್ಧತಿ ಯೋಜನೆಯಲ್ಲಿ (ಎನ್.ಪಿ.ಎಸ್) ದಿನಾಂಕ:1–4–2010 ರಿಂದ ವಂತಿಗೆ ಪಾವತಿ ಪ್ರಾರಂಭವಾಗುವ ಮುಂಚಿತವಾಗಿ ಜುಲೈ 2007 ಮತ್ತು ಆಗಸ್ಟ್ 2007 ತಿಂಗಳಿನ ವೇತನ ಬಿಲ್ಲುಗಳಲ್ಲಿ ಎನ್.ಪಿ.ಎಸ್. ನೌಕರರ ವೇತನದಲ್ಲಿ ಕಟಾವಣೆ ಮಾಡಿದ ಎನ್.ಪಿ.ಎಸ್. ವಂತಿಗೆಗಳನ್ನು ಲೆಕ್ಕಶೀರ್ಷಿಕೆ "8342 ಸಾರ್ವಜನಿಕ ಲೆಕ್ಕ ನಿಧಿ" ಯಲ್ಲಿ ಇಟ್ಟಿರುವ ಮೊತ್ತವನ್ನು ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳು (D.D.O) "ಪೇಯಿಸ್ ರಸೀದಿ" ಮೂಲಕ ಖಜಾನೆಯಿಂದ ಹಣ ಸೆಳೆಯಲು ಮಂಜೂರಾತಿ ನೀಡಿರುತ್ತದೆ.

ಲೆಕ್ಕ ಶೀರ್ಷಿಕೆ 8342 ಅಥವಾ ಇಲಾಖಾ ರಾಜಸ್ವ ಲೆಕ್ಕ ಶೀರ್ಷಿಕೆಗೆ ಜಮೆಯಾಗಿರುವ ಮೊತ್ತದ ಸಂಬಂಧ ಹಣ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಗಳು (DDO) ನೌಕರರ ಕಟಾವಣೆ ವಿವರಗಳನ್ನು ಎನ್ ಪಿ ಎಸ್ ಘಟಕಕ್ಕೆ ನೀಡುವುದು ಡಿ.ಡಿ.ಓ ಗಳಿಂದ ಬಂದ ವಿವರಗಳನ್ನು ಎನ್.ಪಿ.ಎಸ್. ಘಟಕದಲ್ಲಿ ಎನ್.ಎಂ.ಸಿ. ಯಿಂದ ಪಡೆದಿರುವ ವಿವರಗಳೊಂದಿಗೆ ಸಮನ್ವಯ ಮಾಡಿಕೊಂಡು ಎನ್.ಪಿ.ಎಸ್ ಘಟಕದಿಂದ ಪ್ರತಿ ಡಿ.ಡಿ.ಓ. ಗೆ ಲೆಕ್ಕ ಸಮನ್ವಯ ತ:ಖ್ತೆಯನ್ನು ನೀಡುವುದು.

ಲೆಕ್ಕ ಸಮನ್ವಯ ತ:ಖ್ತೆಯನ್ನು ಎನ್.ಪಿ.ಎಸ್. ಘಟಕದಲ್ಲಿ ಪಡೆದುಕೊಂಡನಂತರ ಲೆಕ್ಕ ಸಮನ್ವಯಗೊಳಿಸಿರುವುದನ್ನು ಡಿ.ಡಿ.ಓ.ಗಳು ಖಚಿತಪಡಿಸಿಕೊಂಡು ದೃಢೀಕರಿಸುವುದು. "8342" ಲೆಕ್ಕಶೀರ್ಷಿಕೆಗೆ ಜಮೆಯಾಗಿರುವ ಮೊತ್ತವನ್ನು ಹಣ ಸೆಳೆಯುವ ಹಾಗೂ ಬಟವಾಡೆ ಅಧಿಕಾರಿಗಳು "ಪೇಯಿಸ್ ರಸೀದಿ"ಯ ಮೇಲೆ ಸೆಳೆಯಬಹುದಾಗಿದೆ. ಈ "ಪೇಯೀಸ್ ರಸೀದಿ" ಯಲ್ಲಿ ಯಾವ ಯಾವ ನೌಕರರಿಗೆ ಎಷ್ಟು ಮೊತ್ತವನ್ನು ಪಾವತಿಸಬೇಕು ಎಂಬ ಬಗ್ಗೆ 'ಅನುಬಂಧ' ವನ್ನು ಲಗತ್ತಿಸಿ ಆಯಾ ನೌಕರರ ಹೆಸರುಗಳಿಗೆ ಚೆಕ್ಕುಗಳನ್ನು ಪಡೆದು ವಿತರಿಸುವುದು. ಜಮೆ ಮಾಡಿರುವ ಮೊತ್ತದಲ್ಲಿ ಆಯಾ ನೌಕರರಿಗೆ ಸರಿಯಾದ ಮೊತ್ತವನ್ನು ಪಾವತಿಸುವುದು ಸಂಬಂಧಿಸಿದ ಡಿ.ಡಿ.ಓ.ಗಳ ಜವಾಬ್ದಾರಿಯಾಗಿರುತ್ತದೆ.

ಎನ್.ಪಿ.ಎಸ್. ಸಂಬಂದವಾಗಿ ರಾಜಸ್ವ ಲೆಕ್ಕ ಶೀರ್ಷಿಕೆಯಡಿಯಲ್ಲಿ ಜಮೆಯಾಗಿರುವ ಮೊತ್ತಗಳನ್ನು ಡಿ.ಡಿ.ಓಗಳು ಕರ್ನಾಟಕ ಆರ್ಥಿಕ ಸಂಹಿತೆ 142ರ ಪ್ರಕಾರ ಮತ್ತು ಸರ್ಕಾರದ ಆದೇಶ ಸಂಖ್ಯೆ. ಆಇ 2:ಟಿಎಫ್‌ಪಿ 2010 ದಿನಾಂಕ:30–4–2010ರಲ್ಲಿನ ಕ್ರಮ ಸಂಖ್ಯೆ 26ರಲ್ಲಿ ನೀಡಿರುವ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯಡಿಯಲ್ಲಿ ನೀಡಿರುವ ಅಧಿಕಾರದಲ್ಲಿ ಸಂಬಂಧಪಟ್ಟ ನೌಕರರಿಗೆ ಮರುಪಾವತಿಸುವ ಕ್ರಮ ತೆಗೆದುಕೊಳ್ಳುವುದು.

ನೌಕರರ ವೇತನದಲ್ಲಿ NPS contribution amount ಆದ ಶೇಕಡ 10 ಮೂಲ ವೇತನ + ತುಟ್ಟಿ ಭತ್ಯವನ್ನು ವೇತನದಲ್ಲಿ ಸೆಳೆಯದೆ (shortdrawn) ಇರುವ ಪ್ರಕರಣಗಳಲ್ಲಿ ವೆತ್ಯಾಸ ಮೊತ್ತವನ್ನು ಡಿ.ಡಿ.ಓಗಳು ಸಳೆದು ನೌಕರರಿಗೆ ಪಾವತಿಸಲು ಕ್ರಮ ತೆಗೆದುಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಿ. ಶಾಮರಾವ್)
ಸರ್ಕಾರದ ಜಂಟಿ ಕಾರ್ಯದರ್ಶಿ,
(ಆರ್ಥಿಕ ನಿಯಮಗಳು, ಆಯವ್ಯಯ
ಸಂಕಲನ ಮತ್ತು ಸಮಿತಿ ಶಾಖೆ)
ಆರ್ಥಿಕ ಇಲಾಖೆ

ಪ್ರತಿ:
1. ಮಹಾಲೇಖಪಾಲರು (ಎ ಮತ್ತು ಇ) /ಪ್ರಧಾನ ಮಹಾಲೇಖಪಾಲರು, (ಲೆಕ್ಕಪರಿಶೋಧಕರು– ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
5. ವಿಶೇಷಾಧಿಕಾರಿಗಳು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವಿಶ್ರಾಂತಿವೇತನ).

6. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
7. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
8. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು/
   ಮುಖ್ಯ ಲೆಕ್ಕಾಧಿಕಾರಿಗಳು.
9. ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ಬೆಂಗಳೂರು.
10. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
11. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.
12. ಉಪ ನಿರ್ದೇಶಕರು, ನೂತನ ಪಿಂಚಣಿ ಯೋಜನೆ ಘಟಕ, 4ನೇ ಮಹಡಿ,
    ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು-1.
13. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ, ಖನಿಜ ಭವನ, ದೇವರಾಜ್ ಅರಸ್ ರಸ್ತೆ, ಬೆಂಗಳೂರು.
14. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.